ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, 64-67
©*IIMRD*, Mysuru

IIMRD JOURNALS
www.iimrd.com

# ಪ್ರೊ. ಮಲ್ಲೇಪುರಂ ಅವರ ಸಾಹಿತ್ಯ ಮತ್ತು ಪುರಾಣ ಸಹ ಸಂಬಂಧಗಳ ಅಧ್ಯಯನ : ಒಂದುವಿಶ್ಲೇಷಣೆ

**ತಿಪ್ಪಣ್ಣ ಬಸಪ್ಪ ಕಂಬಾಗಿ[*] ಮತ್ತು ಡಾ. ಪಿ. ನಾಗರಾಜ[**]**

[*] ಸಂಶೋಧನಾ ವಿದ್ಯಾರ್ಥಿ ; [**]ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿವಿ, ಬೆಳಗಾವಿ.

***ಸಾರಾಂಶ* (Abstract)**

*ಪುರಾಣ ಎಂದರೆ ಹಳೆಯದು, ಪ್ರಾಚೀನ ಎನ್ನುವುದು ಶಬ್ದದ ಅರ್ಥ. ಸಾಹಿತ್ಯ ಎನ್ನುವುದು ಕಲಾ ಕೇಂದ್ರಿಕ ವಸ್ತು. ಸಾಹಿತ್ಯ ಮತ್ತು ಪುರಾಣಗಳ ತೌಲನಿಕತೆಯನ್ನು ಅರಿಯುವುದು ಸಂಕೀರ್ಣವಾದ ಕೆಲಸವಾಗಿದೆ. ಪುರಾಣಗಳಲ್ಲಿ ಕಲೆಯು ಮುಖ್ಯ ಅಲ್ಲವೇ ಅಲ್ಲ. ಆದರೆ ಸಾಹಿತ್ಯದಲ್ಲಿ ಕಲೆಯೇ ಮುಖ್ಯವಾಗಿರುತ್ತದೆ. ಪುರಾಣ ಮತ್ತು ಸಾಹಿತ್ಯ ಬೇರೆ ಬೇರೆ ಆದರೂ ಒಂದು ಹಂತದಲ್ಲಿ ಎರಡೂ ಹೊಂದಾಣಿಕೆಯಾಗುತ್ತದೆ, ಮಲ್ಲೇಪುರಂ ಅವರ ಸಾಹಿತ್ಯ ಮತ್ತು ಪುರಾಣ ಸಂಬಂಧಗಳ ಬಗೆಗಿನ ಅಧ್ಯಯನವು ಈ ವಿಷಯಗಳ ಮೇಲೆ ಬೆಳಕು ಚೆಲ್ಲುವ ಕೆಲಸವಾಗಿದೆ. ಮಲ್ಲೇಪುರಂ ಅವರ ಪ್ರಕಾರ ಸಾಹಿತ್ಯ ಮತ್ತು ಪುರಾಣಗಳು ಒಂದು ನೆಲೆಯಲ್ಲಿ ತಾಯಿ–ಮಗಳ ಸಂಬಂಧದಂತೆ ಎಂದು ಹೇಳಿದ್ದಾರೆ.*

***ಮುಖ್ಯಪದಗಳು* (Keywords):** ಪುರಾಣ, ಭಾರತೀಯ, ಮಲ್ಲೇಪುರಂ, ಸಹಸಂಬಂಧ, ಸಾಹಿತ್ಯ.

**ಪೀಠಿಕೆ**

ಪ್ರೊ. ಮಲ್ಲೇಪುರಂ ಅವರ 'ಸಾಹಿತ್ಯ ಮತ್ತು ಪುರಾಣ ಸಹಸಂಬಂಧಗಳ ಅಧ್ಯಯನ' ಎಂಬ ಕೃತಿಯು ಸಾಹಿತ್ಯ ಮತ್ತು ಪುರಾಣಗಳ ಸವಿಸ್ತಾರ ವಿಷಯಗಳನ್ನು ಒಳಗೊಂಡ ಪ್ರಮುಖ ಗ್ರಂಥವಾಗಿದೆ. ಮಲ್ಲೇಪುರಂ ಅವರ ಪ್ರಕಾರ ಸಾಹಿತ್ಯ ಕೃತಿ ಅನೇಕ ಸಾಹಿತ್ಯ ಕೃತಿಗಳಿಗೆ ತಾಯಿಯಾಗಲಾರದು. ಆದರೆ ಪುರಾಣ ಅನೇಕ ಸಾಹಿತ್ಯಗಳಿಗೆ ತಾಯಿಯಾಗುತ್ತದೆ. ತಾಯ್ತನ ಇರುವುದರಿಂದ ಪುರಾಣಕ್ಕೆ ವಿಸ್ತಾರವಾದ ನೆಲೆ ಮತ್ತು ಹಾಸು ದೊಡ್ಡದಿದೆ. ಒಂದು ಪುರಾಣದಿಂದ ಅನೇಕ ಸಾಹಿತ್ಯ ಕೃತಿಗಳು ಜನ್ಯವಾಗುತ್ತವೆ ಎಂದು ಪ್ರೊ. ಮಲ್ಲೇಪುರಂ ಅವರು ಪುರಾಣದ ಬಗ್ಗೆ ಅದರ ಮಹತ್ವವನ್ನು ತಮ್ಮ ಮಾತುಗಳಲ್ಲಿ ತಿಳಿಸಿದ್ದಾರೆ. ಅದಕ್ಕೆ ಸಾಕ್ಷಿ ಎಂಬಂತೆ ಗುಣಭದ್ರರ 'ಮಹಾಪುರಾಣ' ಉದಾಹರಣೆಯಾಗಿದೆ.

ಅಧ್ಯಯನದಲ್ಲಿ ಸಾಹಿತ್ಯ ಮತ್ತು ಪುರಾಣಗಳ ತೌಲನಿಕ ವ್ಯತ್ಯಾಸ ಮತ್ತು ಮಹತ್ವಗಳನ್ನು ಹಾಗೂ ಅವುಗಳ ನಡುವಿನ ಅಂತರ ಸಂಬಂಧಗಳ ಬಗ್ಗೆ ಪ್ರಕ್ರೀಯೆ, ವ್ಯಾಖ್ಯಾನ, ವಿವರಣೆ ಜೊತೆಗೆ ವಿಶ್ಲೇಷಣೆಗಳನ್ನು

*Please cite this article as: ತಿಪ್ಪಣ್ಣ ಬಸಪ್ಪ ಕಂಬಾಗಿ ಮತ್ತು ಪಿ. ನಾಗರಾಜ (2021).* ಪ್ರೊ. ಮಲ್ಲೇಪುರಂ ಅವರ ಸಾಹಿತ್ಯ ಮತ್ತು ಪುರಾಣ ಸಹ ಸಂಬಂಧಗಳ ಅಧ್ಯಯನ : ಒಂದುವಿಶ್ಲೇಷಣೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 64–67*

ಹಂತ–ಹಂತದಲ್ಲಿ ನೀಡಿದ್ದಾರೆ. ಪುರಾಣ ಮತ್ತು ದಾಸ ಸಾಹಿತ್ಯದ ಅಧ್ಯಯನವು ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಪ್ರಭಾವವನ್ನು ಬೀರಲು ಸಾಹಿತ್ಯಾಸಕ್ತರು ಅದರ ಅಧ್ಯಯನದ ಒಲುವಿಗೆ ಕಾರಣ. ಪುರಾಣಗಳು ಭಾರತದಂತಹ ಸಾಂಪ್ರದಾಯಿಕ ಆಚಾರ ವಿಚಾರಗಳನ್ನೊಳಗೊಂಡ ದೇಶದಲ್ಲಿ ಪುರಾಣಗಳು ತಮ್ಮದೆ ಆದ ಪ್ರಭಾವವನ್ನು ಸಾಮಾಜಿಕ, ಭೌಗೋಳಿಕ, ಹಾಗೂ ಮಾನಸಿಕ ಅಂಶಗಳನ್ನೊಳಗೊಂಡು ಜನರನ್ನು ತಮ್ಮ ನಂಬಿಕೆಯ ವಿಚಾರಗಳ ಮೇಲೆ ಬಂಧಿಸಿರುತ್ತವೆ ಹಾಗೂ ಸಾಹಿತ್ಯವು ಕಲಾ ನೈಪುಣ್ಯತೆಯ ಜೊತೆಗೆ ವೈಚಾರಿಕತೆಯನ್ನು ಜನರಿಗೆ ನೀಡುವಲ್ಲಿ ಮಹತ್ವವಾದ ಪಾತ್ರವಹಿಸಿದೆ.

ಮಲ್ಲೇಪುರಂ ಅವರ ಸಾಹಿತ್ಯ ಮತ್ತು ಪುರಾಣ ಸಹಸಂಬಂಧಗಳ ಅಧ್ಯಯನದಲ್ಲಿ ಜಾಗತಿಕ ಪುರಾಣಗಳ ಪರಿಕಲ್ಪನೆಯ ಬಗ್ಗೆ ಸಾಹಿತ್ಯ ಮತ್ತು ಪುರಾಣಕ್ಕಿರುವ ಅನೋನ್ಯ ಸಂಬಂಧಗಳನ್ನು ಪ್ರಪಂಚದ ಬೇರೆ ಬೇರೆ ಭಾಷೆಗಳ ಸಾಹಿತ್ಯಗಳಲ್ಲಿ ಹಾಗೂ ಬೇರೆ ಬೇರೆ ದೇಶಗಳ ಚಿಂತಕರ ವಿಚಾರಧಾರೆಗಳನ್ನು ನೀಡಲಾಗಿದೆ. ಇಂಗ್ಲೀಷರು ಪ್ರಪಂಚದ ಬೇರೆ ಬೇರೆ ಪ್ರದೇಶಗಳನ್ನು ಗೆದ್ದು ಅಲ್ಲಿಯ ಜನರನ್ನು ಆಡಳಿತ ಕ್ರಮಕ್ಕೆ ಒಳಪಡಿಸುವುದಕ್ಕೆ ಅವರ ಪುರಾಣವನ್ನು ತಿಳಿಯುವುದು ಅನಿವಾರ್ಯ ಎಂದು ಪುರಾಣಗಳ ಅಧ್ಯಯನದ ಮೊರೆಹೋಗಿದ್ದನ್ನು ನಾವು ನೋಡಬಹುದು.

ಇದು ಜಾಗತಿಕ ನೆಲೆಯಲ್ಲಿ ಪುರಾಣದ ಪರಿಕಲ್ಪನೆಯನ್ನು ತಿಳಿಯಲು ನಮಗಿರುವ ಒಂದು ಮಾದರಿ. ಪುರಾಣಗಳನ್ನು ಸಾಂಸ್ಕೃತಿಕ ಅಧ್ಯಯನದ ನೆಲೆಯಲ್ಲಿ ತಿಳಿಯಲು ಹೊರಟ ಮೊದಲ ಚಿಂತಕ ಎಂದು ಇಟಲಿಯ 'ಗಿಯಾಂ ಭಾಟಸ್ಟ್‌ವಿಕೊ' ಇವರ "ದ ನ್ಯೂ ಸೈನ್" ಎಂಬ ಪುಸ್ತಕ ತಿಳಿಸುತ್ತದೆ. ನಮ್ಮ ದೇಶದಲ್ಲಿ 19ನೇ ಶತಮಾನದ ಹೊತ್ತಿಗೆ ಮ್ಯಾಕ್ಸ್ ಮುಲ್ಲರ ಮೊದಲಾದ ಜರ್ಮನಿಯ ಪಂಡಿತರು ಸಂಸ್ಕೃತ ಭಾಷಾ ಸಾಹಿತ್ಯ ಅಧ್ಯಯನವನ್ನು ನಡೆಸಿದ್ದರು. ನಮ್ಮ ದೇಶದಲ್ಲಿ ಪುರಾಣಗಳ ಅಧ್ಯಯನಕ್ಕೆ ಜಾನಪದವು ಒಂದು ರೀತಿಯ ಚೌಕಟ್ಟನ್ನು ಒದಗಿಸಿತು. ಇನ್ನೊಂದು ದಿಕ್ಕಿನಲ್ಲಿ ಫ್ರೆಂಚ್ ಸಮಾಜ ಶಾಸ್ತ್ರಜ್ಞರು ಸಾಮಾಜಿಕ ಸತ್ಯಗಳು ಎಂಬ ಪರಿಕಲ್ಪನೆಯನ್ನು ಮಂಡಿಸಿದರು. ಸಾಹಿತ್ಯವೂ ಪುರಾಣವನ್ನು ತನ್ನ ತೆಕ್ಕೆಗೆ ಹೇಗೆ ಪಡೆಯುತ್ತದೆ ಎಂಬ ಸಂಗತಿಯನ್ನು ವಿವರಿಸಲಾಗಿದೆ. ಉದಾಹರಣೆಗೆ ಪ್ರಾಚೀನವಾದ ಒಂದು ಕತೆಯನ್ನು ಅದರಲ್ಲಿ ನಂಬಿಕೆಯಿರುವ ವ್ಯಕ್ತಿಗಳು ಬರಹದ ರೂಪದಲ್ಲಿ ಹಿಡಿದಿಡುವುದು ಹಾಗೂ ಮೂಲ ಪುರಾಣ ಕತೆಯನ್ನು ವಿಸ್ತರಿಸುವುದು ಮಾತ್ರವಲ್ಲ ಅದಕ್ಕೆ ಹೊಸ ಅರ್ಥವನ್ನು ನೀಡುವುದು. ಪುರಾಣದ ಸತ್ಯಾಸತ್ಯತೆ ಕುರಿತು ಚಿಂತಿಸದೆ ಅದನ್ನು ಇತರ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು.

ಪುರಾಣ ಮತ್ತು ಭಾರತೀಯ ಸಾಹಿತ್ಯ ಸಂದರ್ಭಗಳ ನೆಲೆಯಲ್ಲಿ ನೋಡುವುದಾದರೆ ಭಾರತೀಯ ಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯವು ತನ್ನ ಪ್ರಭಾವವನ್ನು ಬೀರಿದ್ದು ಪುರಾಣಗಳ ಎಲ್ಲ ರೂಪವು ಸಂಸ್ಕೃತ ಭಾಷೆಯ ಮೂಲ ಪಠ್ಯವೆಂದೇ ಕರೆಯಬಹುದು. ಮುಂದೆ ಸಾಹಿತ್ಯ ಕೃತಿಯ ಸಂದರ್ಭದಲ್ಲಿ ಸೂಕ್ಷ್ಮ ಪಠ್ಯವಾಗಿ ಗುರುತಿಸಬಹುದು. ಮಲ್ಲೇಪುರಂ ಅವರ ಅಧ್ಯಯನದ ಪ್ರಕಾರ ಪುರಾಣಗಳು ಭಾರತೀಯ ಇತಿಹಾಸದ ಅರ್ಥ ಮೌಲ್ಯಗಳ ವಿಷಯಗಳಾಗಿವೆ. ಭಾರತೀಯರಲ್ಲಿ ಪುರಾಣಗಳನ್ನು ನಿರ್ದಿಷ್ಟವಾಗಿ ಧಾರ್ಮಿಕ ವಿಚಾರಗಳಿಗಾಗಿ ಮಾತ್ರ ನಿರ್ಮಿತವಾದ ವಸ್ತು ಎಂದು ಹೇಳಬಹುದು. ಅಲ್ಲಿ ಕಲೆಯ ದೃಷ್ಟಿಯನ್ನು ಹರಿಸುವುದು ಸಮಂಜಸವಲ್ಲ.

ಭಾರತೀಯ ಪುರಾಣಗಳಲ್ಲಿ ವೈದಿಕ ಪುರಾಣ, ಜೈನ ಪುರಾಣ ಮತ್ತು ಶೈವ ಪುರಾಣ ಪ್ರಮುಖವಾದವುಗಳಾಗಿವೆ. ವೈದಿಕ ಪುರಾಣಗಳು ಸಾಹಿತ್ಯ ಕೃತಿಗಳಿಗೆ ದೊಡ್ಡ ಅವಕಾಶಗಳನ್ನು ನೀಡಿದ್ದು ಭಾರತದ ಬಹುತೇಕ ಮಹಾಕಾವ್ಯಗಳಿಗೆ ಹೆದ್ದಾರಿ ಎಂದೇ ಹೇಳಬಹುದು. ವೈದಿಕ ಪುರಾಣಗಳು ರಾಮಕೃಷ್ಣರ ಜೀವನವನ್ನು ನೀಡುವ ಅನೇಕ ಮಹಾಕಾವ್ಯಗಳಿಗೆ ಮೂಲ ಪ್ರೇರಣೆಯಾಗಿವೆ ಹಾಗೂ ಜೈನ ಪುರಾಣಗಳು ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ನೋಡುವುದಾದರೆ ಪ್ರಾಕೃತ ಮತ್ತು ಸಂಸ್ಕೃತದ ನೆಲೆಯಲ್ಲೇ ನೋಡಬೇಕಾಗುತ್ತದೆ. ಈ ಪುರಾಣಗಳು ವೈದಿಕ ಅಥವಾ ಭಾಗವತ ಪುರಾಣಗಳ ಮೂಲ ರೂಪದಲ್ಲಿಯೇ ಹುಟ್ಟಿ ಬೇರೆ ಸಿದ್ಧಾಂತವನ್ನು ಪ್ರತಿನಿಧಿಸುವ ಪುರಾಣಗಳಾಗಿವೆ. ಇವುಗಳು ಕೂಡಾ ಅನೇಕ ಮಹಾಕಾವ್ಯಗಳ ರಚನೆಗೆ ಕಾರಣವಾಗಿವೆ. ಇಲ್ಲಿ ಪುರಾಣಗಳು ಪೂರ್ವ ಪುರಾಣ, ಮಹಾ ಪುರಾಣ ಹೀಗೆ ಅನೇಕ ಸಾಹಿತ್ಯ ಕೃತಿಗಳಿಗೆ ಮೂಲ ಪಠ್ಯಗಳಾಗಿವೆ.

ಭಾರತೀಯ ಪುರಾಣ ಹಿನ್ನೆಲೆ ನೋಡುತ್ತಾ ಹೊರಟಾಗ ಶೈವ ಪುರಾಣಗಳು ಮಹತ್ವದ ಪಾತ್ರವಹಿಸುತ್ತವೆ. ಮಲ್ಲೇಪುರಂ ಅವರ ಅಧ್ಯಯನದಲ್ಲಿ ಶೈವ ಮತ್ತು ವೈಷ್ಣವ ಪುರಾಣಗಳು ಪೈಪೋಟಿ ನೆಲೆಯಲ್ಲಿ ನಿರ್ಮಾಣವಾದದ್ದವು. ಮಹಾಕಾವ್ಯ, ಕಾವ್ಯ, ಖಂಡಕಾವ್ಯಗಳು ರಚನೆಗೊಳ್ಳಲು ಪುರಾಣದ ಮೂಲಗಳನ್ನೆ ಬಳಸಿಕೊಂಡಿದ್ದಾರೆಂಬುದನ್ನು ಕಾಣಬಹುದು. ಶೈವ ಪುರಾಣಗಳಲ್ಲಿ ಶಿವ ಪುರಾಣವು ಭಾರತದ ಎಲ್ಲ ಭಾಗಗಳಲ್ಲಿಯೂ ಪ್ರಚಲಿತದಲ್ಲಿದ್ದ ಮಹಾ ಶೈವಪುರಾಣವಾಗಿದೆ. ಹೀಗೆ ಭಾರತದ ಪುರಾಣ ಮತ್ತು ಸಾಹಿತ್ಯದ ತೌಲನಿಕತೆಯನ್ನು ಅಥವಾ ಸಹ ಸಂಬಂಧವನ್ನು ಈ ಗ್ರಂಥದಲ್ಲಿ ತಿಳಿಯಬಹುದು. ಯಾವುದೇ ಸಾಹಿತ್ಯವು ಪುರಾಣದ ಮೂಲದಲ್ಲಿ ನಿರ್ಮಿತವಾದಲ್ಲಿ ಅದನ್ನು ವಿಮರ್ಶಿಸಲು ಪುರಾಣ ಮೂಲ ಆಕರಗಳಾಗಿ ನಾವು ಪಡೆಯಬೇಕಾಗುತ್ತದೆ. ಇದು ಭಾರತೀಯ ಸಾಹಿತ್ಯ ಸಂದಂರ್ಭದಲ್ಲಿ ತುಂಬಾ ಹೆಚ್ಚಾದಂತಹ ಅಧ್ಯಯನವಾಗಿದೆ. ಸಾಹಿತ್ಯ ಮತ್ತು ಪುರಾಣಗಳು ಜನರ ನಂಬಿಕೆಗಳ ಮತ್ತು ಸಾಮಾಜಿಕ ಬದ್ಧತೆಗಳ ವಿಷಯಗಳೇ ಆದರೂ ಎರಡೂ ಬೇರೆ ಬೇರೆಯಾದ ಮನಃಸ್ಥಿತಿಯನ್ನು ಜನರಲ್ಲಿ ಮೂಡಿಸುತ್ತದೆ ಹಾಗೂ ಸಾಹಿತ್ಯವು ವಿಶ್ಲೇಷಣೆಗೆ ವಿಮರ್ಶೆಗೆ ದಾರಿ ಮಾಡಿಕೊಡುವಷ್ಟು ಪುರಾಣಗಳು ವಿಮರ್ಶೆಗೆ ಮತ್ತು ವಿಶ್ಲೇಷಣೆಗೆ ಅಷ್ಟೊಂದು ಅನುಮತಿ ನೀಡುವುದಿಲ್ಲ.

ಸಾಹಿತ್ಯ ಮತ್ತು ಪುರಾಣ ಸಹಸಂಬಂಧಗಳ ಅಧ್ಯಯನವು ಕನ್ನಡ ಸಾಹಿತ್ಯ ಸಂದರ್ಭಗಳ ನೆಲೆಯಲ್ಲಿ ನೋಡುವುದಾದರೇ ಕನ್ನಡದಲ್ಲಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಿದ್ದು, ಅವುಗಳೆಂದರೆ ಪ್ರಾಚೀನ ಸಾಹಿತ್ಯ ಚರಿತೆ ಮತ್ತು ಪುರಾಣ, ಪ್ರಾಚೀನ ಕನ್ನಡ ಮತ್ತು ಪುರಾಣ, ಮಧ್ಯಕಾಲೀನ ಸಾಹಿತ್ಯ ಮತ್ತು ಪುರಾಣ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಮತ್ತು ಪುರಾಣ

ಭಾರತೀಯ ಸಾಹಿತ್ಯ ಸಂದರ್ಭಗಳಿಗೆ ಹೋಲಿಸಿ ನೋಡುವುದಾದರೆ ಕನ್ನಡ ಸಾಹಿತ್ಯ ಸಂದರ್ಭಕ್ಕೆ ತುಂಬಾ ಬದಲಾವಣೆಯನ್ನು ಕಾಣಬಹುದು. ಪುರಾಣಗಳನ್ನು ಭಾರತೀಯ ನೆಲೆಯಲ್ಲಿ ಪಡೆದುಕೊಂಡು ಅದಕ್ಕೆ ದೇಶಿಯ ಅಂದರೆ ಪ್ರಾದೇಶಿಕ ಅಂಶಗಳನ್ನು ನೀಡಿ ಸಾಹಿತ್ಯ ಕೃತಿಗಳನ್ನು ನಿರ್ಮಿಸಲು ಬಳಸಿಕೊಳ್ಳಲಾಗಿದೆ. ಭಾರತೀಯ ಧಾರ್ಮಿಕ ಭಾವನೆಗಳನ್ನು ನಾವು ಪುರಾಣಗಳಲ್ಲಿ ಪಡೆದುಕೊಳ್ಳಬಹುದು. ಅದರಂತೆ ಸಾಹಿತ್ಯವು ಪುರಾಣದ ವಿಷಯವನ್ನು ಇಟ್ಟುಕೊಂಡು ಕಾವ್ಯಗಳನ್ನು ನಿರ್ಮಿಸಲು

ಸಹಕಾರಿಯಾಗಿದೆ. ಕನ್ನಡದ ಪಾಲಿಗೆ ಆ ಕೆಲಸವನ್ನು ಹತ್ತನೇ ಶತಮಾನದಲ್ಲಿ ಪ್ರಾರಂಭಿಸಲಾಗಿದೆ ಎನ್ನಬಹುದು. ಅದರಲ್ಲಿ ಪ್ರಮುಖ ಕವಿಗಳೆಂದರೇ ಪಂಪ ಮತ್ತು ಜನ್ನರು. ಇವರು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪುರಾಣಕ್ಕೆ ಸಾಹಿತ್ಯಿಕ ರೂಪ ನೀಡಿದರು. ಮುಂದೆ ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ಹರಿಹರ, ರಾಘವಾಂಕ, ಚಾಮರಸ, ಮತ್ತು ಕುಮಾರ ವ್ಯಾಸರು ಆ ಕೆಲಸವನ್ನು ಮುಂದುವರೆಸಿದರು ಹಾಗೂ ಆಧುನಿಕ ಸಾಹಿತ್ಯದಲ್ಲಿ ನೋಡುವುದಾದರೆ ಕುವೆಂಪು, ಬೇಂದ್ರೆ, ಪು.ತಿ.ನ ಮತ್ತು ಅಡಿಗರು ಪುರಾಣ ಮೂಲಕ ಕಾವ್ಯ ಕೃತಿಗಳನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಿರ್ಮಿಸಿ ಸಾಹಿತ್ಯ ಮತ್ತು ಪುರಾಣಗಳ ಸಂಬಂಧವನ್ನು ಹಾಗೂ ಅವುಗಳ ಸೂಕ್ಷ್ಮತೆಯನ್ನು ತಿಳಿಯಲು ಅನುವು ಮಾಡಿಕೊಟ್ಟಿದ್ದಾರೆ.

**ಉಪಸಂಹಾರ**

ಮಲ್ಲೇಪುರಂ ಅವರ ಸಾಹಿತ್ಯ ಮತ್ತು ಪುರಾಣ ಸಹ ಸಂಬಂಧಗಳ ಅಧ್ಯಯನ ಎಂಬ ಕೃತಿಯಲ್ಲಿ ಒಟ್ಟಾರೆಯಾಗಿ ಪುರಾಣಗಳ ಮಹತ್ವ ಹಾಗೂ ಸಾಹಿತ್ಯದ ಮಹತ್ವ ಹಾಗೂ ರಚನೆಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ. ಅವರ ಅಧ್ಯಯನದ ಈ ಕೃತಿಯು ಜಾಗತಿಕ, ಭಾರತೀಯ, ಕನ್ನಡ ಸಾಹಿತ್ಯ ಸಂದರ್ಭಗಳಲ್ಲಿನ ಪುರಾಣ ಮತ್ತು ಸಾಹಿತ್ಯಗಳ ಸಂಬಂಧಗಳನ್ನು ಅರಿಯಲು ಸಹಕಾರಿಯಾಗಿದೆ. ಅವರ ಈ ಕೃತಿಯೂ ನಾಲ್ಕು ಅಧ್ಯಾಯಗಳನ್ನೊಳಗೊಂಡ ಮಹತ್ವಪೂರ್ಣ ಕೃತಿಯಾಗಿದೆ. ಅವರ ಈ ಕೃತಿಗೆ ಅನೇಕ ಗ್ರಂಥಗಳನ್ನು ಅನುಭಂದ ನೀಡಿದ್ದು, ಅವುಗಳಲ್ಲಿ ಸಂಸ್ಕೃತ ಭಾಷೆಯ ಸುಮಾರು ನಲವತ್ನಾಲ್ಕು, ಇಂಗ್ಲೀಷ್ ಭಾಷೆಯ ಸುಮಾರು ಮೂವತ್ತಾರು ಪುಸ್ತಕಗಳನ್ನು ಹಾಗೂ ಹತ್ತು ಬಿಡಿ ಲೇಖನಗಳನ್ನು ಆಧರಿಸಿ ಅಧ್ಯಯನದ ವಿಷಯವನ್ನು ಮತ್ತಷ್ಟು ಪ್ರಭಾವಿಯಾಗುವಂತೆ ನೀಡಿದ್ದಾರೆ. ಪ್ರೊ. ಮಲ್ಲೇಪುರಂ ಅವರು ಸಾಹಿತ್ಯ ಮತ್ತು ಪುರಾಣ ಎಂಬ ಕೃತಿಯನ್ನು ಇಲ್ಲಿಯವರೆಗೆ ಸುಮಾರು ಮೂರು ಬಾರಿ ಮರುಮುದ್ರಣ ಮಾಡಿರುತ್ತಾರೆ. ನಾಲ್ಕು ಅಧ್ಯಾಯಗಳ ಈ ಕೃತಿಯಲ್ಲಿ ಪುರಾಣ ಮತ್ತು ಸಾಹಿತ್ಯಗಳ ನಡುವಿನ ಸಂಬಂಧವನ್ನು ತಿಳಿಯಲು ತುಂಬಾ ಉಪಯುಕ್ತ ಕೃತಿಯಾಗಿದೆ.

**ಪರಮರ್ಶನ ಗ್ರಂಥಗಳು**


- ಮಲ್ಲೇಪುರಂ ಜಿ.ವೆಂಕಟೇಶ. (2019). ಸಾಹಿತ್ಯ ಮತ್ತು ಪುರಾಣ. ಉದಯ ಪ್ರಕಾಶನ ಬೆಂಗಳೂರು.
- ಮಲ್ಲೇಪುರಂ ಜಿ.ವೆಂಕಟೇಶ. (2019). ಧ್ಯಾನಸೂತ್ರ. ಉದಯ ಪ್ರಕಾಶನ ಬೆಂಗಳೂರು
- ಶಾಂತರಾಜು ಎಚ್. ವಿ. (2016). ಪ್ರೊ. ಮಲ್ಲೇಪುರಂ ಬದುಕು ಬರಹ. ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು.